ದಿನಾಂಕಃ 14-09-2017 ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು. -

ಮುಂದುವರೆದ ಮುಖ್ಯ ವಿಚಾರಣೆಃ– ಶ್ರೀ. ಎಚ್ ಬಿ ವಕೀಲರಿಂದ ಃ-

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿದ್ದೇನೆ. ಅದರಲ್ಲಿರುವ ಸಂಗತಿಗಳು ಸತ್ಯವಾಗಿರುತ್ತವೆ. ಸಹಿಂಗಳು ನನ್ನವೇ ಇರುತ್ತವೆ.

ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟ 6 ಪಹಣಿ ಪತ್ರಿಕೆಗಳನ್ನು ನಿಪಿ-1 ರಿಂದ 6 ಎಂದು, ಎಂಆರ್-16/81-82 ರ ನಕಲನ್ನು ನಿಪಿ-7 ಎಂದು, ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟ ಇನ್ನೂ 7 ಪಹಣಿ ಪತ್ರಿಕೆಗಳನ್ನು ನಿಪಿ-8 ರಿಂದ ನಿಪಿ-14 ಎಂದು, 4 ಮ್ಯುಟೇಶನ್ ದಾಖಲೆಗಳ ಧೃಡೀಕೃತ ನಕಲುಗಳನ್ನು ನಿಪಿ-15 ರಿಂದ 18 ಎಂದು, ಇನ್ನೊಂದು ಪಹಣಿ ಪತ್ರಿಕೆಯನ್ನು ನಿಪಿ-19, 2 ಡಿಸಿಬಿ ಖಾತಾ ಪುರವಣಿಗಳನ್ನು ನಿಪಿ-20 ಮತ್ತು 21 ಎಂದು, 3 ಡೈಗ್ರಾಮ್ ಪ್ರತಿಗಳನ್ನು ನಿಪಿ-22 ರಿಂದ ನಿಪಿ-24 ಎಂದು, 3 ಶಾಲಾ ಧೃಡೀಕರಣ ಪತ್ರಗಳನ್ನು ನಿಪಿ-25 ರಿಂದ ನಿಪಿ-27 ಎಂದು, 4 ಮರಣ ಪ್ರಮಾಣ

ಪತ್ರಗಳನ್ನು ನಿಪಿ-28 ರಿಂದ ನಿಪಿ-31 ಎಂದು, 1 ಜನ್ಮ ದಿನಾಂಕ ಧೃಡೀಕರಣ ಪತ್ರವನ್ನು ನಿಪಿ-32, 2 ಶಾಲಾ ದಾಖಲಾತಿ ನಕಲುಗಳನ್ನು ನಿಪಿ-33 ಮತ್ತು 34, ಇನ್ನೊಂದು ವ್ಯಾಸಂಗ ಪ್ರಮಾಣ ಪತ್ರವನ್ನು ನಿಪಿ-35 ಎಂದು, 2 ರುಣಭಾರ ಪ್ರಮಾಣ ಪತ್ರಗಳನ್ನು ನಿಪಿ-36 ಮತ್ತು 37 ಎಂದು, ದಿಃ 25-08-1972 ರ ಕ್ರಯ ಪತ್ರದ ಧೃಡೀಕೃತ ನಕಲನ್ನು ನಿಪಿ-38, ದಿ ಃ 24-12-2001ರ ಕ್ರಯ ಪತ್ರದ ಧೃಡೀಕೃತ ನಕಲನ್ನು ನಿಪಿ-39 ಎಂದು, ದಿ ಃ 03-06-1997 ರ ಕ್ರಯ ಪತ್ರದ ಧೃಡೀಕೃತ ನಕಲನ್ನು ನಿಪಿ-40 ಎಂದು, ದಿನಾಂಕ ಃ 27-03-2014 ರ 3 ಕ್ರಯ ಪತ್ರಗಳ ಧೃಡೀಕೃತ ನಕಲಗಳನ್ನು ನಿಪಿ-41 ರಿಂದ 43 ಎಂದು ಗುರುತಿಸಲಾಯಿತು. 4 ಮತದಾರರ ಪಟ್ಟಿಗಳ ಧೃಡೀಕೃತ ನಕಲುಗಳನ್ನು ನಿಪಿ-44 ರಿಂದ 47 ಎಂದು, ನಮ್ಮ ಕುಟುಂಬದ ವಂಶವೃಕ್ಷದ ಧೃಡೀಕರಣ ಪತ್ರವನ್ನು ನಿಪಿ-48 ಎಂದು ಗುರುತಿಸಲಾಯಿತು. (ನಿಪಿ-48 ರ ಜೊತೆ ವಂಶವೃಕ್ಷವನ್ನು ಲಗತ್ತಿಸಿಲ್ಲ)

ಈ ಎಲ್ಲಾ ದಾಖಲೆಗಳನ್ನು ಪರಿಗಣಿಸಿ ದಾವೆಯನ್ನು ಕೇಳಿದಂತೆ ಡಿಕ್ರಿ ಮಾಡಬೇಕು ಅಂತ ಪ್ರಾರ್ಥಿಸುತ್ತೇನೆ.

ಪಾಟೀ ಸವಾಲುಃ ಶ್ರೀ ಎಚ್ ಜಿ ಆರ್, ಶ್ರೀ ಆರ್ಆರ್, ಶ್ರೀ ಟಿ ಎಂ ಎಸ್, ಶ್ರೀ ಎಚ್ಪಿಪಿ ವಕೀಲರು ಸಮಯ ಕೋರಿರುತ್ತಾರೆ, ಪಾಟೀಸವಾ-ಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಹಿಂ.ಸಿ.ಜೆ. ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.